ಅ) ಆ ಕಾಮಗಾರಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ದೊರಕಿದೆಯೇ? ಮತ್ತು ಈವರೆಗೆ ಆ ಕಾಮಗಾರಿಗೆ ಮಾಡಿರುವ ವೆಚ್ಚವೆಷ್ಟು?

ಇ) ಆ ಕಾಮಗಾರಿಯನ್ನು ಅಂದಾಜಿಗೆ ಅನುಗುಣವಾಗಿ ಎಷ್ಟು ಹಂತದಲ್ಲಿ ಕಾರ್ಯಗತ ಮಾಡಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಅ) ಆಬಲೂರು ಮಾರ್ಗವಾಗಿ ಕೋಡ-ಹಿರೇಕೆರೂರು ರಸ್ತೆಯನ್ನು ಸುಧಾರಣೆ ಮಾಡುವ ಕಾಮಗಾರಿಗೆ ತಗಲುವ ವೆಚ್ಚ 30.09 ಲಕ್ಷ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಆ) ಮೊದಲ ಹಂತದಲ್ಲಿ 13.69 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಿ ದೊರೆತಿದೆ. ಇಲ್ಲಿಯವರೆಗೆ ಒಟ್ಟು 3.00 ಲಕ್ಷ ರೂ. ವೆಚ್ಚವಾಗಿದೆ.

ಇ) ಈ ರಸ್ತೆಯನ್ನು 2 ಹಂತಗಳಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ. ಮೊದಲಿನ ಹಂತವನ್ನು ಡಿಸೆಂಬರ್ 94ರ ಒಳಗಾಗಿ ಮುಗಿಸಲಾಗುವುದು. ಎರಡನೇ ಹಂತವನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ವಿರಾಜಪೇಟೆ ಮಾಕುಟ್ಟ ರಸ್ತೆ ದುರಸ್ತಿ ಕುರಿತು

609 - ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಾಜಪೇಟೆ ಮಾಕುಟ್ಟ ರಸ್ತೆಯು ವಾಹನ ಸಂಚಾರಕ್ಕೆ ಕಳೆದ 7-8 ವರ್ಷಗಳಿಂದ ಯೋಗ್ಯಕರವಾಗಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ರಸ್ತೆಯನ್ನು ದುರಸ್ಥಿ ಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) 1993-94ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಈ) ಒಟ್ಟು 1993-94ನೇ ಸಾಲಿನಲ್ಲಿ ಖರ್ಚಾದ ಹಣ ಎಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಅ) ಈ ರಸ್ತೆಯ ಕೆಲವು ಭಾಗಗಳು ನಾದುರಸ್ಥಿಯಲ್ಲಿದ್ದುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದ್ರಿ ರಸ್ತೆಯಲ್ಲಿ ಉಂಟಾಗಿದ್ದ ಗುಂಡಿಗಳನ್ನು ಡಾಂಬರು ಜಲ್ಲಿ ಸಮೇತ ಮುಚ್ಚಿ ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಡಲಾಗಿದೆ. ಅಲ್ಲದೆ ಪ್ರಸ್ತುತ 93-94 ಆಯವ್ಯಯದಲ್ಲಿ ಈ ರಸ್ತೆಯ ಚಾಚು 50 ರಿಂದ 69.7 ಕಿ.ಮೀ ರ ಆಯ್ದ ಭಾಗಗಳ ಅಭಿವೃದ್ಧಿಯನ್ನು 15 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಗಿರಿ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ ಈ ರಸ್ತೆ ಅಭಿವೃದ್ಧಿಗೆ ಒಟ್ಟು ರೂ. 9.5 ಲಕ್ಷಗಳ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದ್ದು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಈ ರಸ್ತೆಗೆ ನಿರ್ವಹಣೆ ಹಾಗೂ ದುರಸ್ಥಿಗೆ ಪ್ರಸ್ತುತ ಸಾಲಿನಲ್ಲಿ ಒಟ್ಟು ರೂ. 22.645 ಲಕ್ಷ ಮೊತ್ತದ ಕಾಮಗಾರಿಗಳ ಕಾರ್ಯಕ್ರಮಕ್ಕೆ ಅನುಮೋದನೆ ನೀಡಲಾಗಿದೆ.

ಈ) 1993-94ನೇ ಸಾಲಿನಲ್ಲಿ ಈ ರಸ್ತೆ ಮೇಲೆ ಫೆಬ್ರವರಿ 94ರ ವರೆಗೆ ಆದ ಒಟ್ಟು ಖರ್ಚು ರೂ. 11,32,482 ಆಗಿರುತ್ತದೆ.